ಅಂಚೆ ಸುಬ್ರಹ್ಮಣ್ಣ, ಕೊಪ್ಪ

ದೇವಸ್ಥಾನದಲ್ಲಿ ಕೊಟ್ಟ ಹೂವಿನ ಪ್ರಸಾದವನ್ನು ಕಿವಿಗೆ ಇಟ್ಟುಕೊಳ್ಳಬೇಕೋ, ತಲೆಯ ಮೇಲೋ?



ತಲೆ ಜಾರುಬಂಡೆಯಂತಿದ್ದರೆ, ಕಿವಿಯ ಮೇಲೆ.

ಬಿ. ಬಸವರಾಜ್, ಹರಿಹರ

ಅಳಿಯನ ಕಷ್ಟ ಅರ್ಥವಾಗುವ ಹೆಂಡತಿಗೆ ಗಂಡನ ಕಷ್ಟ ಅರ್ಥವಾಗುವುದಿಲ್ಲವೇಕೆ?

'ಅಳಿಯನ ಕಷ್ಟ' ಎಂದರೆ ಮಗಳೇ ಅಲ್ಲವೇ! ತಾಯಿಗೆ ಪತಿಗಿಂತ ಸುತೆ ಚೆನ್ನಾಗಿ ಅರ್ಥವಾಗಿರುತ್ತಾಳೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಪಕ್ಕದ ಮನೆಯವಳು 'ಗೃಹಲಕ್ಷ್ಮಿ' ಭಾಗ್ಯದಡಿ 2000 ಪಡೆಯಲು ಯೋಗ್ಯಳಲ್ಲವೆಂದು ಬೇಜಾರದಲ್ಲಿದ್ದಾಳಲ್ಲ?

ಸೂಪರ್. ಹಿಂದುಳಿಯಲು ಪೈಪೋಟಿ ನಡೆಸುವುದು ಆಧುನಿಕ ಭಾರತದ ಹುಚ್ಚು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಗಂಡನಿಗೆ ಹೆಂಡತಿ ಲಕ್ಷ್ಮಿ ಆದರೆ ಪ್ರೇಯಸಿ?



ಅವಳೂ ಲಕ್ಷ್ಮಿಯೇ; ಸತಿ ಅಕೌಂಟೆಡ್ ವೈಟ್ ಮನಿ; ಅವಳು ಬ್ಲ್ಯಾಕ್ ಮನಿ.

ಬಾ.ರಂ. ಸುರೇಶ್, ಶಿವಮೊಗ್ಗ

ಹಿಂದಿನ ಕಾಲದ ಲವ್‌ಗೂ, ಈಗಿನ ಕಾಲದ ಲವ್‌ಗೂ ಏನು ವ್ಯತ್ಯಾಸ?

ಆಗ ತುಡಿತವೇ ಆಧಾರ; ಈಗ ದುಡಿತದ ಮೇಲೆ ತುಡಿತದ ನಿರ್ಧಾರ.

ರಾಮಸ್ವಾಮಿ, ಭೀಮನಕಟ್ಟೆ

'ಮತಬೇಟೆ' ಅಂತಾರಲ್ಲ, 'ಮತ' ಏನು ಕಾಡು ಪ್ರಾಣಿಯೆ?

'ಬೇಟೆ' ಎಂದರೆ ಮಕ್ಕಳು; 'ಮತಬೇಟೆ' ಎಂದರೆ ಮತಕ್ಕೆ ಹುಟ್ಟಿದವರು – ಗೆದ್ದ ಅಭ್ಯರ್ಥಿ.

ವಿಜಯಾ ಪ್ರಸಾದ್, ಬೆಂಗಳೂರು

ರಾಜಕಾರಣಿಗಳು ಅವರು ಕೊಟ್ಟ ಎಲ್ಲಾ ಆಶ್ವಾಸನೆಗಳನ್ನು ಈಡೇರಿಸಿಬಿಟ್ಟರೆ ಏನಾಗುತ್ತದೆ?

ದೇಶದ ತಿಥಿ, ಮಾಸಿಕ, ಊನಮಾಸಿಕ, ವೈಕುಂಠ.

ವಿಜಯಕುಮಾರ್ ಎಚ್.ಕೆ. ರಾಯಚೂರು

ಮೊಬೈಲ್‌ಗಳಲ್ಲಿ ಫೋಟೊ, ವಿಡಿಯೊ ತೆಗೆಯಲು ಆಯ್ಕೆಯಿಲ್ಲದಿದ್ದರೆ ಏನಾಗುತ್ತಿತ್ತು?

ಅಪಘಾತದ ಸ್ಥಳಗಳಲ್ಲಿ ಸೆಲ್ಫಿ ಹಾವಳಿ ತಪ್ಪುತ್ತಿತ್ತು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಶ್ರೀಮಂತರಿಗಿಂತ ಭಿಕ್ಷುಕರು ಹೆಚ್ಚು ಸಂತೋಷವಾಗಿ ಇರುವುದೇಕೆ?

ಏನೇನೂ ಇಲ್ಲದ ಕಾರಣ ಚಿಂತೆಯೂ ಇಲ್ಲದೆ ಚೆನ್ನಾಗಿ ನಿದ್ರಿಸುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು

ಸೋತವರದು ಆತ್ಮಾವಲೋಕನ; ಗೆದ್ದವರದು ಸಿಂಹಾವಲೋಕನ; ಮತದಾರನದು?

ಅವನಿಂದಲೂ ಕನ್ನ, ಇವನಿಂದಲೂ ಕನ್ನ.

ಬಿ. ಚಂದ್ರೇಗೌಡ, ಬೆಂಗಳೂರು

ಬೀಗುವುದಕ್ಕೂ, ಬಾಗುವುದಕ್ಕೂ ಏನು ವ್ಯತ್ಯಾಸ?

ಹೋಣ: ಹೂ ಬಿಟ್ಟ ಕುಂಬಳದ ಬಳ್ಳಿ ಬೀಗುತ್ತದೆ; ಕಾಯಿ ಹೊತ್ತಾಗ ಬಾಗುತ್ತದೆ.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಒಳ್ಳೆಯ ಟೀಚರ್, ಒಳ್ಳೆಯ ಡಾಕ್ಟರ್, ಒಳ್ಳೆಯ ಎಂಜಿನಿಯರ್ ಇರುವಂತೆ ಒಳ್ಳೆಯ ರಾಜಕಾರಣಿ ಏಕಿಲ್ಲ?

ಹಣ ಮುಟ್ಟದ ಮತದಾರ ಇದ್ದಾಗ ಮಾತ್ರ ಗುಣಮಟ್ಟದ ರಾಜಕಾರಣಿ ದೊರಕಬಹುದು.

ಶ್ರೀನಿವಾಸ ಕೆ.

ಹಲ್ಲುಗಾವಲಿನ ಗೇಟಿಗೆ ಬೀಗ ಹಾಕಿದೆ. ಹೊರಗೆ ಹಸಿದ ದನಗಳು ಕಾಯುತ್ತಿವೆ. ಗೇಟು ತೆರೆಯುವುದು ಯಾವಾಗ?

ದನಗಳು ಗೇಟು ಕಾಯುತ್ತಿರುವ ತೋಳಕ್ಕೆ ಪಾಲು ಅರ್ಪಿಸಿದಾಗ.

## ವಾರದ ಪ್ರಶ್ನೆ

ಕೆ.ಎಚ್. ತೇಜೇಶ್ಚಂದ್ರ, ಕ್ಯಾತ್ಸಂದ್ರ

ಹಿಂದೆ ರಾಜಕಾರಣಿಗಳು ದೇಶಕ್ಕಾಗಿ ಏನು ಮಾಡಲಿ ಎಂದು ಹಂಬಲಿಸುತ್ತ ಸೇವೆ ಮಾಡುತ್ತಿದ್ದರು. ಈಗ?

ಹಾಗೆಲ್ಲ ಯೋಚಿಸಿದರೆ ಮತಿಭ್ರಮಣೆಯಾಗಿದೆಯೆಂದು ಪಕ್ಷದಿಂದ ಹೊರಗಟ್ಟುವರಂತೆ.

ಅನಸೂಯ ಟಿ, ಕೇದಿಗೆಮನೆ

ರಾಜಕಾರಣಿಗಳಿಗೆ ಒಳ್ಳೆಯ ಬುದ್ಧಿ ಬರಲು ಯಾವ ದೇವರ ಮೊರೆ ಹೋಗಬೇಕು ಗುರುಗಳೆ?

ಈ ಪ್ರಶ್ನೆಯನ್ನು ಸ್ವಯಂ ಬ್ರಹ್ಮನೇ ಬೃಹಸ್ಪತಿಯನ್ನು ಕೇಳುತ್ತಿರುವನಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಮ್ಮ ಜನ ಆನೆಗಳನ್ನು ಏಕೆ ಕೊಂಡುಕೊಳ್ಳುತ್ತಿಲ್ಲ?

ಸದನದ ಬಿಳಿ ಆನೆಗಳನ್ನು ಸಾಕುವುದರಲ್ಲೇ ಸುಸ್ತಾಗಿರುವುದರಿಂದ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಒಂದರ ಸುತ್ತ ತಿರುಗುವುದೇ ಪ್ರದಕ್ಷಿಣೆ. ಆತ್ಮ ಪ್ರದಕ್ಷಿಣೆ ಎಂದರೆ?



ಸೆಲ್ಫಿ ತೆಗೆದುಕೊಳ್ಳಲು ಚಾಚಿದ ಕೈಯಲ್ಲಿ ಫೋನ್ ಹಿಡಿದು ಸುತ್ತುಸುತ್ತು ಸುತ್ತುವುದು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಶುದ್ಧ ಕನ್ನಡ ಕಲಿಯಬೇಕೆಂದಿರುವೆ. ನಿಮ್ಮ ಅಮೂಲ್ಯ ಸಲಹೆ?

ಕೂಡಲೆ ಟೀವಿ ನೋಡುವುದನ್ನು ನಿಲ್ಲಿಸಿ. ಅಮೆರಿಕದ ಶ್ರೀವತ್ಸ ಜೋಷಿಯನ್ನು ಸಂಪರ್ಕಿಸಿ.

ದಿನೇಶ್, ಗುಡ್ಡದೂರು

ಮದ್ಯಪಾನ ಹಾನಿಕರವೆಂದು ಬಾಟಲಿ ಮೇಲೆ ಬರೆದಿದ್ದರೂ ಸರ್ಕಾರ ಮದ್ಯ ಕುಡಿಸಲು ಕಾರಣ?

ಉಪ್ಪಿನಕಾಯಿಯಲ್ಲಿ ನೀಡಲಾಗದ ನೆಮ್ಮದಿಯನ್ನು ನಶೆಯಲ್ಲಾದರೂ ನೀಡಲೆಂದು.

■ **ರಾಮ್**